ಶ್ರೀ ಯು.ಟಿ. ಖಾದರ್ :- ಅಲ್ಲಿ ವಾಸಿಸುವ ಜನರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳಬೇಕು.

<u>ಏತ ನೀರಾವರಿ ಯೋಜನೆ ಅನುಷ್ಠಾನ :-</u>

78 (860) ಶ್ರೀ **ಪಾಪರೆಡ್ಡಿ ಎ. (ರಾಯಚೂರು)** :- ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ನೀರಾವರಿ ಯೋಜನೆಯಡಿ ರಾಯಚೂರು ಜಿಲ್ಲೆಗೆ ಬೃಹತ್ ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಉದ್ದೇಶಿಸಲಾಗಿದೆಯೇ;

ಆ) ರಾಯಚೂರು ಮತಕ್ಷೇತ್ರಕ್ಕೆ ಬೃಹತ್ ಏತ ನೀರಾವರಿ ಯೋಜನೆಯನ್ನು ರೂಪಿಸಲಾಗಿದೆಯೇ, ಹಾಗಿದ್ದಲ್ಲಿ ಎಲ್ಲೆಲ್ಲಿ ವಿವರ ಒದಗಿಸುವುದು;

ಇ) ಸದರಿ ಯೋಜನೆಯ ರೂಪುರೇಷೆಗಳನ್ನು ವಿವರಿಸುವುದು, ಈ ಯೋಜನೆಯಡಿ ಯಾವ ನದಿಯಿಂದ ನೀರನ್ನು ಮೇಲೆತ್ತಲಾಗುವುದು; ಯೋಜನೆಯ ಅಂದಾಜು ವೆಚ್ಚವೆಷ್ಟು; ಇದರಿಂದ ಪ್ರಯೋಜನ ಪಡೆಯುವ ಪ್ರದೇಶಗಳಾವುವು, (ವಿವರ ಒದಗಿಸುವುದು)?

ಶ್ರೀ **ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)** :

ಅ) ರಾಜ್ಯದ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳಡಿ ರಾಯಚೂರು ಬೃಹತ್ ಏತ ನೀರಾವರಿ ಯೋಜನೆಯು ಪರಿಶೀಲನೆಯಲ್ಲಿದೆ.

ಆ & ಇ) ಕೃಷ್ಣಾ ಕಣಿವೆಯ ಸ್ಕೀಮ್-ಬಿ ಅಡಿ ರಾಜ್ಯಕ್ಕೆ ಲಭ್ಯವಾಗಬಹುದಾದ ನೀರಿನ ಪ್ರಮಾಣ 4 ಟಿ.ಎಂ.ಸಿ. ನೀರಿನ ಬಳಕೆಗಾಗಿ ರಾಯಚೂರು ಬೃಹತ್ ಏತ ನೀರಾವರಿ ಯೋಜನೆಯನ್ನು ರೂಪಿಸಲಾಗಿದೆ. ಈಗ ತಯಾರಿಸಿಕೊಂಡಿರುವ ಪ್ರಾಥಮಿಕ ಯೋಜನಾ ವರದಿಯಂತೆ ಸ್ಕೀಮ್- 'ಬಿ' ಅಡಿ ನಾರಾಯಣಪೂರ ಬಲದಂಡೆ ಕಾಲುವೆಯನ್ನು ಕಿ.ಮೀ. 95 ರಿಂದ ಮುಂದಕ್ಕೆ ಕಿ.ಮೀ 178.40 ವರೆಗೆ ವಿಸ್ತರಿಸಿ, ರಾಯಚೂರು ತಾಲ್ಲೂಕಿನ ಕುರುಬದೊಡ್ಡಿ ಗ್ರಾಮದ ಹತ್ತಿರ ಜಾಕ್‌ವೆಲ್ ನಿರ್ಮಾಣದೊಂದಿಗೆ ನಾರಾಯಣಪೂರ ಬಲದಂಡೆ ಕಾಲುವೆಯ ಕಿ.ಮೀ. 154.028 ರಲ್ಲಿ ಕಾಲುವೆಯಿಂದಲೇ ನೇರವಾಗಿ ಪಂಪ್ ಮೂಲಕ ನೀರನ್ನು ಆರ್.ಎಲ್. 421.900 ಮೀ. ಮಟ್ಟದವರೆಗೆ ಎತ್ತಿ ರೈಸಿಂಗ್ ಮೇನ್ ನಿರ್ಮಿಸಿ, ಪೂರ್ವ ಹಾಗೂ ಪಶ್ಚಿಮ ಕಾಲುವೆ ಜಾಲದ ನಿರ್ಮಾಣದೊಂದಿಗೆ, ರಾಯಚೂರು ತಾಲ್ಲೂಕಿನ ಸುಮಾರು 17,885 ಹೆಕ್ಟೇರ್ ನೀರಾವರಿ ಕಲ್ಪಿಸಲು ಯೋಜಿಸಲಾಗಿದೆ.

ಪ್ರಾಥಮಿಕ ಯೋಜನಾ ವರದಿಯಂತೆ ಸದರಿ ರಾಯಚೂರು ಬೃಹತ್ ಏತ ನೀರಾವರಿ ಯೋಜನೆಯ ಅಂದಾಜು ಮೊತ್ತ ಸುಮಾರು ರೂ. 227.68 ಕೋಟಿ ಆಗಬಹುದೆಂದು ಅಂದಾಜಿಸಲಾಗಿದೆ.

ಆ) ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಪ್ರಶ್ನೆ ಸಂಖ್ಯೆ : 78 (860)

ಶ್ರೀ ಎ. ಪಾಪರೆಡ್ಡಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ ತುಂಗಭದ್ರಾ ಮತ್ತು ಕೃಷ್ಣ ಹೀಗೆ 2 ನದಿಗಳು ಇದ್ದರೂ ಸಹ 50 ಹಳ್ಳಿಗಳಿಗೆ ನೀರಾವರಿ ಪ್ರದೇಶವಿಲ್ಲ. ಆ ಕಾರಣದಿಂದ, ಸನ್ಮಾನ್ಯ ಜಲಸಂಪನ್ಮೂಲ ಸಚಿವರನ್ನು ನಾನು ಒತ್ತಾಯ ಮಾಡುತ್ತೇನೆ, ಈ ಯೋಜನೆ ಬಿಟ್ಟು ಬೇರೆ ಯೋಜನೆ ಮಾಡಿ ಆ ಜನರಿಗೆಲ್ಲ ನೀರಾವರಿ ಸೌಲಭ್ಯ ಒದಗಿಸುವ ವಿಚಾರ ಮಾಡಬೇಕು.

ಶ್ರೀಕೆ.ಎಸ್. ಈಶ್ವರಪ್ಪ :- ಮಾನ್ಯ ಸದಸ್ಯರ ಕಳಕಳಿ ನಮಗೆ ಖಂಡಿತವಾಗಿಯೂ ಅರ್ಥವಾಗುತ್ತದೆ. ರಾಯಚೂರು ಬೃಹತ್ ನೀರಾವರಿ ಯೋಜನೆಯ ಅಂದಾಜು ಮೊತ್ತ 227.68 ಕೋಟಿ ರೂಪಾಯಿಗಳಾಗಿರುತ್ತದೆ. ಈ ಯೋಜನೆಯ ವಿವರವಾದ ಸರ್ವೆ ತನಿಖಾ ಕಾರ್ಯ ಕೈಗೊಳ್ಳಲು ಕೃಷ್ಣ ಭಾಗ್ಯ ಜಲ ನಿಗಮದ ಅಡಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಯೋಜನೆಗಾಗಿ ಏನು ಪರ್ಯಾಯ ವ್ಯವಸ್ಥೆ ಮಾಡಬೇಕೆನ್ನುವ ಅಪೇಕ್ಷೆಯನ್ನು ಸದಸ್ಯರು ವ್ಯಕ್ತಪಡಿಸಿದ್ದಾರೆ, ಖಂಡಿತವಾಗಿಯೂ ಅದಕ್ಕೆ ಪರ್ಯಾಯವಾದ ವ್ಯವಸ್ಥೆಯನ್ನು ನಾವು ಯೋಚನೆ ಮಾಡುತ್ತಿದ್ದೇವೆ. ಆದಷ್ಟು ಬೇಗ ಪರ್ಯಾಯ ವ್ಯವಸ್ಥೆ ಮುಖಾಂತರ ಆ ಕಾರ್ಯವನ್ನು ಕೂಡ ತೆಗೆದುಕೊಳ್ಳಬೇಕೆನ್ನುವ ಯೋಚನೆಯನ್ನು ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು :- ದಯಮಾಡಿ, ಕುಳಿತುಕೊಳ್ಳಿ. ಉಪ ಪ್ರಶ್ನೆಗಳಿಗೆ ಅವಕಾಶವಿಲ್ಲ. ಆಗಲೇ ಬಹಳ ತಡವಾಗಿದೆ.